**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.</u>**

ದಿನಾಂಕ 6 ನೇ ಫೆಬ್ರವರಿ ಮಾಹೆ 2026 ನೇ ಇಸವಿ.

**<u>ಸಿ.ಸಿ. ನಂಃ 472/2025</u>**

ರಾಜ್ಯ ಸರ್ಕಾರದ ಪರವಾಗಿ,
ಆರಕ್ಷಕ ಉಪ ನಿರೀಕ್ಷಕರು,
ಅಜೆಕಾರು ಆರಕ್ಷಕ ಠಾಣೆ,
ಅಜೆಕಾರು ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

ವಿರುದ್ಧ -

1) ರಂಗನಾಥ ,
ಪ್ರಾಯ 32 ವರ್ಷ
ತಂದೆಃ ತೋಟಪ್ಪ ,
ವಾಸಃ ಸಿರಿಗೆರೆ ,ಆಯನೂರು
ತಮ್ಮದಿಹಳ್ಳಿ ಗ್ರಾಮ ,
ಶಿವಮೊಗ್ಗ 577 211.

2) ಸುಂದರ, ,
ಪ್ರಾಯ 57 ವರ್ಷ
ತಂದೆ ಚೆನ್ನಯ್ಯ ಸೆರ್ವೆಗಾರ್
ವಾಸಃ ಪಡ್ಡಾಯಿಮಾರು , ಶಿರ್ಲಾಲು ಗ್ರಾಮ,
ಕಾರ್ಕಳ ತಾಲೂಕು . ..ಆರೋಪಿತರು

<u>ದೋಷಾರೋಪಣೆ</u>

ಶ್ರೀಮತಿ ಶರ್ಮಿಳಾ ಸಿ ಎಸ್., ಬಿ.ಎ.ಎಲ್., ಎಲ್‌ಎಲ್.ಎಂ ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಈ ಮೇಲ್ಕಂಡ ನಿಮ್ಮನ್ನು ಕೆಳಕಂಡಂತೆ ದೋಷಾರೋಪಿಸುತ್ತೇನೆ.

ಮೊದಲನೆಯದಾಗಿ , ಆರೋಪಿತರಾದ ನೀವುಗಳು ದಿನಾಂಕ 27-09-2025 ರಂದು ಮಧ್ಯಹ್ನ 12-10 ಗಂಟೆಗೆ ಹೆಬ್ರಿ ತಾಲೂಕು ಅಂಡಾರು ಗ್ರಾಮದ ಕೊಡಮಣಿತ್ತಾಯ ದೈವಸ್ಥಾನದ ಬಳಿಯಿಂದ ಎರಡು ಜಾನುವಾರುಗಳನ್ನು

ನಿಮ್ಮ ಸ್ವಂತ ಲಾಭಕ್ಕಾಗಿ ಕಳವು ಮಾಡಿ ಕೆಎ-14-ಬಿ-5868 ನೇ ಸಂಖ್ಯೆಯ ಪಿಕ್‌ಅಪ್ ವಾಹನದಲ್ಲ ಸಾಗಿಸುತ್ತಿದ್ದ ವೇಳೆ ಸಾಕ್ಷಿಯವರಿಗೆ ದೊರೆತ ಖಚಿತ ಮಾಹಿತಿ ಮೇರೆಗೆ 12-30 ಗಂಟೆಗೆ ಅಂಡಾರು ಗ್ರಾಮದ ಕಾಡುಹೊಳೆ ರಸ್ತೆಯಲ್ಲಿನ ಕೊಂದಲ್ಕೆ ಎಂಬಲ್ಲಿ ಪತ್ತೆ ಹಚ್ಚಿದ್ದು ಮತ್ತು ಸದರಿ ವರಾಹನ ಮತ್ತು ಜಾನುವಾರುಗಳನ್ನು ವಶಪಡಿಸಿಕೊಂಡಿದ್ದು , ಆ ಮೂಲಕ ಭಾರತ ನ್ಯಾಯ ಸಂಹಿತೆಯ ಕಲಂ 303(2) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಎರಡನೆಯದಾಗಿ , ಆರೋಪಿತರಾದ ನೀವುಗಳು ಮೇಲೆ ತಿಳಿಸಿದ ದಿನಾಂಕ , ಸಮಯ ಮತ್ತು ಸ್ಥಳದಲ್ಲಿ 2 ಜಾನುವರುಗಳನ್ನು ಮೇಲೆ ತಿಳಿಸಿದ ಪಿಕ್‌ಅಪ್ ವಾಹನದಲ್ಲಿ ಕುತ್ತಿಗೆ ಹಗ್ಗ ಕಟ್ಟಿ ನಿಲ್ಲಿಸಿದ ರೀತಿಯಲ್ಲಿ ತುಂಬಿ ಹಿಂಸಾತ್ಮಕವಾಗಿ ಸಾಗಾಟ ಮಾಡುತ್ತಿದ್ದು , ಆ ಮೂಲಕ ಪ್ರಾಣಿ ಹಿಂಸೆ ನಿಷೇಧಕಾಯ್ದೆ 1960 ರ ಕಲಂ 11(1) (ಡಿ) ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೂರನೆಯದಾಗಿ ಆರೋಪಿತರಾದ ನೀವುಗಳು ಮೇಲೆ ತಿಳಿಸಿದ ದಿನಾಂಕ , ಸಮಯ ಮತ್ತು ಸ್ಥಳದಲ್ಲಿ 2 ಜಾನುವರುಗಳನ್ನು ಮಾನಸ ಮಾಡುವ ಉದ್ದೇಶದಿಂದ ಮೇಲೆ ತಿಳಿಸಿದ ಪಿಕ್‌ಅಪ್ ವಾಹನದಲ್ಲಿ ಕುತ್ತಿಗೆ ಸಾಗಾಟ ಮಾಡುತ್ತಿದ್ದು , ಆ ಮೂಲಕ ಕರ್ನಾಟಕ ಜಾನುವಾರು ಹತ್ತೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯಿದೆ 2020 ರ ಕಲಂ 4 , 5 , 7 , 12 ರಡಿಯಲ್ಲಿ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ಮೇಲೆ ಆರೋಪ ಇದೆ.

ಮೇಲ್ಕಂಡ ದೋಷಾರೋಪಣಗಳಿಗೆ ನೀವು ಈ ನ್ಯಾಯಾಲಯದಿಂದ ಅಧಿವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಆರೋಪಿತರಿಗೆ ಮೇಲಿನ ದೋಷಾರೋಪಣೆಯನ್ನು ಓದಿ ಹೇಳಿ ವಿವರಿಸಿದ್ದು, ಅವರು ಅದನ್ನು ಸರಿಯಾಗಿ ತಿಳಿದುಕೊಂಡು ಉತ್ತರಿಸಿದ್ದಾರೆ ಎಂಬುದಾಗಿ ಈ ಮೂಲಕ ದೃಢೀಕರಿಸುತ್ತೇನೆ. )

(ಶರ್ಮಿಳಾ ಸಿ ಎಸ್ )
ಹಿ. ಸಿ. ನ್ಯಾ ಮತ್ತು ಹೆ. ಮು. ನ್ಯಾ ದಂ .

ಕಾರ್ಕಳ.

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**ಸಿ.ಸಿ. ನಂಃ 472/2025**

ರಾಜ್ಯ ಸರ್ಕಾರದ ಪರವಾಗಿ,
ಆರಕ್ಷಕ ಉಪ ನಿರೀಕ್ಷಕರು,
ಅಜೆಕಾರು ಆರಕ್ಷಕ ಠಾಣೆ,
ಅಜೆಕಾರು ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

ವಿರುದ್ಧ -

ರಂಗನಾಥ ,
ಪ್ರಾಯ 32 ವರ್ಷ
ತಂದೆಃ ತೋಟಪ್ಪ ,
ವಾಸಃ ಸಿರಿಗೆರೆ ,
ಆಯನೂರು
ತಮ್ಮದಿಹಳ್ಳಿ ಗ್ರಾಮ ,
ಶಿವಮೊಗ್ಗ 577 211. 1 ನೇ ಆರೋಪಿ

ದೋಷಾರೋಪಣೆ *(ಚಾರ್ಜ್)*

ಪ್ರಶ್ನೆ 1ಃ ಈ ದಿನ ನಿಮಗೆ ಓದಿ ಹೇಳಿ ವಿವರಿಸಿದ ಮತ್ತು ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆ 2ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರಃ

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವರು ಅರ್ಥ ಮಾಡಿಕೊಂಡ ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 6 ನೇ ಫೆಬ್ರವರಿ ತಿಂಗಳು 2026 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

ಹಿ ಸಿ ನ್ಯಾಮತ್ತು ಹೆ ಮು ನ್ಯಾದಂ, ಕಾರ್ಕಳ

## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**ಸಿ.ಸಿ. ನಂಃ 472/2025**

ರಾಜ್ಯ ಸರ್ಕಾರದ ಪರವಾಗಿ,
ಆರಕ್ಷಕ ಉಪ ನಿರೀಕ್ಷಕರು,
ಅಜೆಕಾರು ಆರಕ್ಷಕ ಠಾಣೆ,
ಅಜೆಕಾರು ಉಡುಪಿ ಜಿಲ್ಲೆ. .... ಪಿರ್ಯಾದುದಾರರು.

**ವಿರುದ್ಧ -**

ಸುಂದರ, ,
ಪ್ರಾಯ 57 ವರ್ಷ
ತಂದೆ ಚೆನ್ನಯ್ಯ ಸೇರ್ವೆಗಾರ್
ವಾಸಃ ಪಡ್ಡಾಯಿಮಾರು , ಶಿರ್ಲಾಲು ಗ್ರಾಮ,
ಕಾರ್ಕಳ ತಾಲೂಕು . ..2 ನೇ ಆರೋಪಿ

**ದೋಷಾರೋಪಣೆ (ಚಾರ್ಜ್)**

ಪ್ರಶ್ನೆ 1ಃ ಈ ದಿನ ನಿಮಗೆ ಓದಿ ಹೇಳಿ ವಿವರಿಸಿದ ಮತ್ತು ನಿಮ್ಮ ಮೇಲೆ ಆರೋಪಿಸಿರುವ ದೋಷಾರೋಪಣೆಯನ್ನು ಅರ್ಥ ಮಾಡಿಕೊಂಡಿರುವಿರಾ?

ಉತ್ತರಃ

ಪ್ರಶ್ನೆ 2ಃ ನಾವು ನಿಮ್ಮ ಮೇಲೆ ಮಾಡಿರುವ ಆರೋಪಗಳನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರಃ

ಮೇಲ್ಕಂಡ ವಿಚಾರಣೆಯನ್ನು ಆರೋಪಿಗೆ ನನ್ನ ಸ್ವಂತ ವಿಚಾರಣೆಯಲ್ಲಿ ಓದಿ ಹೇಳಿ ವಿವರಿಸಿ, ಅವರು ಅರ್ಥ ಮಾಡಿಕೊಂಡ ನಂತರ ಉತ್ತರಗಳನ್ನು ಮತ್ತು ಸದರಿ ಉತ್ತರಗಳು ಪೂರ್ಣವಾಗಿಯೂ ಮತ್ತು ಸತ್ಯವಾಗಿಯೂ ಇದೆಯೆಂದು ದೃಢೀಕರಿಸುತ್ತೇನೆ.

ದಿನಾಂಕ 6 ನೇ ನೇ ಫೆಬ್ರವರಿ ತಿಂಗಳು 2026 ರಂದು ಮೇಲ್ಕಂಡಂತೆ ನಮೂದಿಸಿಕೊಳ್ಳಲಾಯಿತು.

ಹಿ ಸಿ ನ್ಯಾಮತ್ತು ಹೆ ಮು ನ್ಯಾದಂ,   ಕಾರ್ಕಳ